ಚಿತ್ರಗಳು: ಎಂ.ಎಸ್. ಮಂಜುನಾಥ್





# ಎಸ್.ಜೆ.ಪಿ.ಗೆ ವಜ್ರಪ್ರಭೆ

■ ಎನ್. ಜಗನ್ನಾಥ ಪ್ರಕಾಶ್

ವಿ.ಕೆ. ಮೂರ್ತಿ ಭಾರತೀಯ ಚಲನಚಿತ್ರ ರಂಗ ಕಂಡ ಅಪ್ರತಿಮ ಛಾಯಾಗ್ರಾಹಕ. ಸಿನಿಮಾ ಛಾಯಾಗ್ರಹಣ ಸಾಧ್ಯತೆಗಳನ್ನು ವಿಸ್ತರಿಸಿದ ಹಾಗೂ ದೃಶ್ಯಮಾಧ್ಯಮಕ್ಕೆ ಕಾವ್ಯದ ಸಾಧ್ಯತೆಗಳನ್ನು ಕಸಿ ಮಾಡಿದ ಕೀರ್ತಿ ಮೂರ್ತಿ ಅವರದು. ಪ್ರತಿಷ್ಠಿತ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತ ಏಕಮಾತ್ರ ಛಾಯಾಗ್ರಾಹಕ ಎನ್ನುವ ವಿಶೇಷಣ ಅವರ ಸಾಧನೆಯ ಮಹತ್ವವನ್ನು ಹೇಳುವಂತಿದೆ. ಛಾಯಾಗ್ರಹಣ ಕಲಿತರೂ ನಿರ್ದೇಶಕರ ಟೋಪಿ ಧರಿಸಿ ಭಾರತೀಯ ಚಿತ್ರಭೂಮಿಯಲ್ಲಿ ಹಲವು ಪ್ರಯೋಗಗಳನ್ನು ಯಶಸ್ವಿಯಾಗಿ ನಡೆಸಿದ ಕೀರ್ತಿ ಗೋವಿಂದ ನಿಹಲಾನಿ ಅವರದು.

ಮೂರ್ತಿ ಮತ್ತು ನಿಹಲಾನಿ ಅವರನ್ನು ಒಟ್ಟಿಗೆ ನೆನಪಿಸಿಕೊಳ್ಳಲಿಕ್ಕೆ ಕಾರಣವಿದೆ. ಈ ಇಬ್ಬರೂ ಒಂದೇ ಸಂಸ್ಥೆಯಲ್ಲಿ ದೃಶ್ಯಮಾಧ್ಯಮದ ಸೂಕ್ಷ್ಮಗಳನ್ನು ಅರಿತವರು. ಆ ಹೆಮ್ಮೆ ಬೆಂಗಳೂರಿನ ಶ್ರೀ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್‌ಗೆ ಸಲ್ಲುತ್ತದೆ. ಈ ಇಬ್ಬರಷ್ಟೇ ಅಲ್ಲ – ಅಸಂಖ್ಯ ತಂತ್ರಜ್ಞರನ್ನು ವಿವಿಧ ತಾಂತ್ರಿಕ ವಿಭಾಗಳಿಗೆ ಅಣಿಗೊಳಿಸಿದ ಸಂಸ್ಥೆಯಿದು.

ಸ್ವಾತಂತ್ರ್ಯಾನಂತರ ದೇಶದ ಹತ್ತು ಹಲವು ಕೈಗಾರಿಕಾ ವಲಯಗಳಿಗೆ ವೃತ್ತಿ ನೈಪುಣ್ಯ ಹೊಂದಿದ ತಂತ್ರಜ್ಞರನ್ನು ಸಿದ್ಧಪಡಿಸಿಕೊಟ್ಟ ಹಿರಿಮೆ 'ಜಯರಾಜೇಂದ್ರ ಪಾಲಿಟೆಕ್ನಿಕ್'ಗೆ ಸಲ್ಲುತ್ತದೆ. ಆ ಕಾರಣದಿಂದಲೇ ಸ್ವತಂತ್ರ ಭಾರತದ ಅಭಿವೃದ್ಧಿಯ ಪಥದಲ್ಲಿ ಈ ಪಾಲಿಟೆಕ್ನಿಕ್ ಪಾತ್ರವನ್ನೂ ವಿಶೇಷವಾಗಿ ಉಲ್ಲೇಖಿಸಬೇಕು. ಅಂದಹಾಗೆ, 'ಎಸ್.ಜೆ.ಪಿ.' (SJP)ಎನ್ನುವ ಕಿರುನಾಮದಿಂದಲೇ ದೇಶದಾದ್ಯಂತ ಪ್ರಸಿದ್ಧವಾದ ಈ ತಾಂತ್ರಿಕ ಸಂಸ್ಥೆಗೀಗ 75 ವರ್ಷ!

## ಗಾತ್ರದಲ್ಲಿ ಬೃಹತ್ತು, ಗುಣಮಟ್ಟದ ಮಹತ್ತು

ಏಷ್ಯಾದ ಅತಿ ದೊಡ್ಡ ಪಾಲಿಟೆಕ್ನಿಕ್‌ಗಳಲ್ಲಿ ಹಾಗೂ ತಾಂತ್ರಿಕ ತರಬೇತಿ ಕೇಂದ್ರಗಳಲ್ಲಿ ಒಂದಾದ ಈ ಪಾಲಿಟೆಕ್ನಿಕ್ ಬೆಂಗಳೂರಿನ ಹೃದಯಭಾಗವಾದ ಕೆ.ಆರ್. ವೃತ್ತದಲ್ಲಿದೆ. ವಿಧಾನಸೌಧಕ್ಕೆ ಕೂಗಳತೆ ದೂರದಲ್ಲಿರುವ 'ಎಸ್.ಜೆ.ಪಿ.'ಯ ವಾಸ್ತುಶಿಲ್ಪ ಕೂಡ ಸೊಗಸಾದುದು. 14 ಎಕರೆ ಪ್ರದೇಶದಲ್ಲಿ ಹರಡಿಕೊಂಡಿರುವ ಪಾಲಿಟೆಕ್ನಿಕ್‌ನ ಕಲ್ಲಿನ ಕಟ್ಟಡ ತನ್ನ ಭವ್ಯತೆಯಿಂದ ಹಾಗೂ ಅನುಪಮ ಸೌಂದರ್ಯದಿಂದ ನೋಡುಗರನ್ನು ಸೆಳೆಯುತ್ತದೆ.

ಹಲವಾರು ಕೈಗಾರಿಕೆಗಳ ಸ್ಥಾಪನೆಯಿಂದ ದೇಶದ ಗಮನ ಸೆಳೆದಿದ್ದ ಆಗಿನ ಮೈಸೂರು ಸಂಸ್ಥಾನದಲ್ಲಿ ವೃತ್ತಿ ನೈಪುಣ್ಯತೆ ಕಲಿಸುವ ಇಂತಹ ವಿಶಿಷ್ಟ ಸಂಸ್ಥೆಯ ಸ್ಥಾಪನೆಗೆ ಕಾರಣರಾದವರು ವಿಶ್ವವಿಖ್ಯಾತ ಎಂಜಿನಿಯರ್ ಸರ್. ಎಂ. ವಿಶ್ವೇಶ್ವರಯ್ಯ. ರೋಗಗ್ರಸ್ತವಾಗಿದ್ದ ಭದ್ರಾವತಿಯ